☎ 08226-223160
08226-223170
Fax: 08226-223180

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ಸಂ. ಸಿಬ್ಬಂದಿ(3)ಸಿಆರ್/ 222/2008-09 ದಿನಾಂಕ: 30-11-2009

## :ಅಧಿಕೃತ ಜ್ಞಾಪನ :

**ವಿಷಯ**:- ಚಾಮರಾಜನಗರ ಜಿಲ್ಲೆ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ**:- ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿ:26-09-2009.

<<>>

1. ಚಾಮರಾಜನಗರ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿಗೆ (ಆನ್‌ಲೈನ್ ವೆಬ್‌ಸೈಟ್ ಮುಖೇನ) ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸ್ವೀಕೃತಿಯಾಗಿರುವ ಅರ್ಜಿಗಳನ್ನು ನಿಯಮಾನುಸಾರ ಸಪರಿಶೀಲನೆ ಮಾಡಲಾಗಿದ್ದು, ಅಭ್ಯರ್ಥಿಗಳು ಗಳಿಸಿರುವ ದ್ವಿತೀಯ ಪಿಯುಸಿ, ಸಿ.ಬಿ.ಎಸ್.ಸಿ. ಹಾಗೂ ಐ.ಸಿ.ಎಸ್.ಸಿ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಖಡವಾರು ಮೆರಿಟ್ ಆಧಾರದಲ್ಲಿ ಮೀಸಲಾತಿಗೆ ಅನುಗುಣವಾಗಿ 1:5 ರ ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆಯ ಪರಿಶೀಲನಾ ಪಟ್ಟಿಯನ್ನು (Provisional Verification List) ತಯಾರಿಸಿದ್ದು, ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸಲಾಗಿದೆ.

2. ನಿಗಧಿತ ಅರ್ಜಿ ಶುಲ್ಕ ಪಾವತಿಸದೆ ಇರುವ 1486 ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು ತಿರಸ್ಕರಿಸಲಾದ ಅಭ್ಯರ್ಥಿಗಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

3. ನಿಗಧಿಪಡಿಸಿದ ವಿದ್ಯಾರ್ಹತೆಯನ್ನು ಹೊಂದದೆ ಅರ್ಜಿ ಸಲ್ಲಿಸಿರುವ ಜೆ.ಓ.ಸಿ.(J.O.C.) ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು ಅದನ್ನು ಸಹ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

4. ಅಭ್ಯರ್ಥಿಗಳು ತಮ್ಮ ಅಥವಾ ಇತರ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಪ್ರಕಟಿಸಿದ ಮಾಹಿತಿಯ ಬಗ್ಗೆ ಯಾವುದಾದರೂ ಆಕ್ಷೇಪಣೆ ಇದ್ದರೆ ಅದನ್ನು ಲಿಖಿತವಾಗಿ ಪೂರಕ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರಿಗೆ ನೊಂದಾಯಿತ ಅಂಚೆ ಮೂಲಕ ದಿನಾಂಕ: 14-12-2009ರ ಸಂಜೆ 5.30 ಗಂಟೆಯೊಳಗೆ ತಲುಪುವಂತೆ ಸಲ್ಲಿಸತಕ್ಕದ್ದು. ಆ ನಂತರದ ಬರುವ ಆಕ್ಷೇಪಣೆ/ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

5. ಅಭ್ಯರ್ಥಿಗಳು ಅವರ ಹೆಸರುಗಳು ಸಂಬಂಧಪಟ್ಟ ವರ್ಗೀಕರಿಸಿದ ಪಟ್ಟಿಯಲ್ಲಿ ನಮೂದಿಸದೆ ಇದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಹೆಸರು ದಾಖಲಾಗಿದಿಯೇ ಎಂಬುದನ್ನು ಪರಿಶೀಲನೆ ಮಾಡಿ ಕೊಳ್ಳತಕ್ಕದ್ದು.

6. ಪರಿಶೀಲನಾ ಪಟ್ಟಿಯಲ್ಲಿ (Verification List) ಪ್ರತಿ ಒಂದು ಹುದ್ದೆಗೆ 05 ಅಭ್ಯರ್ಥಿಗಳು ಗಳಿಸಿದ ಅಂಕಗಳ ಶೇಕಡವಾರು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿದ್ದು ಅಂತಹ ಅಭ್ಯರ್ಥಿಗಳು ದಿನಾಂಕ: 15-12-2009 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಬೇಕಾಗಿರುತ್ತದೆ.

7. **ಅಭ್ಯರ್ಥಿಯು ದಿನಾಂಕ: 15-12-2009 ರಂದು ಹಾಜರುಪಡಿಸಬೇಕಾದ ಮೂಲ ದಾಖಲಾತಿಗಳು:**

(ಎ) ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ.

(ಬಿ) ದ್ವಿತೀಯ ಪಿ.ಯು.ಸಿ/ಸಿ.ಬಿ.ಎಸ್.ಸಿ/ಐ.ಸಿ.ಎಸ್.ಇ ಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕ ಪಟ್ಟಿ.

(ಸಿ) ಅಭ್ಯರ್ಥಿಯು ಮೀಸಲಾತಿ ಕೋರಿರುವ ಸಂಬಂಧವಾಗಿ ಅಂದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರವರ್ಗ I/ ವರ್ಗ 2A/ ವರ್ಗ 2B/ ವರ್ಗ 3A/ ವರ್ಗ 3B/ ವರ್ಗದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರಿಂದ ಪಡೆದ ನಿಗಧಿತ ನಮೂನೆಯ ಜಾತಿ ದೃಢೀಕರಣ ಪತ್ರವನ್ನು ಹಾಜರುಪಡಿಸಬೇಕು.

(ಡಿ) ಗ್ರಾಮೀಣ/ಕನ್ನಡ ಮಾಧ್ಯಮ/ಮಾಜಿ ಸೈನಿಕ/ಅಂಗವಿಕಲ/ಸರ್ಕಾರಿ ಉದ್ಯೋಗದಲ್ಲಿರುವ ದೃಢೀಕರಣ/ಯೋಜನಾ ನಿರಾಶ್ರಿತರು/ಮೀಸಲಾತಿ ರೀತ್ಯಾ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಅಗತ್ಯ ದೃಢೀಕರಣ ಪತ್ರಗಳನ್ನು ಸಲ್ಲಿಸಬೇಕು.

(ಇ) ಅರ್ಜಿ ಶುಲ್ಕ ಪಾವತಿಸಿದ ಬಗ್ಗೆ ಬ್ಯಾಂಕ್ ಚಲನ್

(ಎಫ್) ಗುರುತಿನ ಚೀಟಿ/ವಿದ್ಯಾ ಸಂಸ್ಥೆಯಿಂದ ಪಡೆದ ಗುರುತಿನ ಚೀಟಿ/ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ಗುರುತಿನ ಚೀಟಿ/ಮತದಾರರ ಗುರುತಿನ ಚೀಟಿ/ಡ್ರೈವಿಂಗ್ ಲೈಸನ್ಸ್.

(ಜಿ) ಯಾವುದೆ ಅಭ್ಯರ್ಥಿ ಅರ್ಜಿ ಶುಲ್ಕವನ್ನು ಚಾಮರಾಜನಗರದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜಿಲ್ಲಾಢಳಿತ ಭವನ ಶಾಖೆಯಲ್ಲಿನ ಉಳಿತಾಯ ಖಾತೆ ಸಂ. 64050010864ಗೆ ಪಾವತಿಸಿದ್ದು, ತಾತ್ಕಾಲಿಕ ಪಟ್ಟಿಯಲ್ಲಿ ಅಂತಹ ಅಭ್ಯರ್ಥಿಯ ಹೆಸರು ಕೈಬಿಟ್ಟಿದ್ದಲ್ಲಿ ಕೂಡಲೇ ಚಲನ್‌ನೊಂದಿಗೆ ತಮ್ಮ ಆಕ್ಷೇಪಣೆಯನ್ನು ಇತರೆ ಪೂರಕ ದಾಖಲೆಗಳೊಂದಿಗೆ ದಿನಾಂಕ: 14-12-2009ರೊಳಗೆ ಜಿಲ್ಲಾಧಿಕಾರಿಗಳ ಕಛೇರಿಗೆ ಹಾಜರುಪಡಿಸಲು ಸೂಚಿಸಿದೆ.

(ಹೆಚ್) ಅಭ್ಯರ್ಥಿಗಳು ಇತ್ತೀಚಿನ 02 ಪಾಸ್‌ಪೋರ್ಟ್ ಸೈಜ್ ಫೋಟೋ ಹಾಜರುಪಡಿಸಬೇಕು.

(ಐ) ಅಂಗವಿಕಲ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗಧಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ದೃಢೀಕರಣ ಪತ್ರ ಹಾಜರುಪಡಿಸಬೇಕು.

8. ಮೇಲ್ಕಂಡ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ 2 ಜೆರಾಕ್ಸ್ ಪ್ರತಿಗಳನ್ನು ಪರಿಶೀಲನಾ ದಿನಾಂಕದಂದು ಹಾಜರುಪಡಿಸತಕ್ಕದ್ದು.

<u>ಅಭ್ಯರ್ಥಿಗಳು ಇಲ್ಲಿ ಗಮನಿಸಬೇಕಾದ ಅಂಶ:</u>

1:5ರ ಅನುಪಾತದಲ್ಲಿ ಪ್ರಕರಟಿಸಿದ ಪಟ್ಟಿಯಂತೆ ಅಂತಿಮವಾಗಿ ಅರ್ಹರಾದ ಒಬ್ಬರನ್ನು ಮಾತ್ರ ಆಯ್ಕೆ ಮಾಡಲಾಗುವುದು.

ಈ ಬಗ್ಗೆ ನೇಮಕಾತಿ ಪ್ರಾಧಿಕಾರದ ತೀರ್ಮಾನವೆ ಅಂತಿಮವಾಗಿರುತ್ತದೆ. ಈ ಕುರಿತು ಯಾವುದೆ ಪತ್ರ ವ್ಯವಹಾರಗಳನ್ನು ಅಭ್ಯರ್ಥಿಗಳು ಮಾಡುವಂತಿಲ್ಲ.

9. ದಿನಾಂಕ:30-11-2009ರಂದು ಪ್ರಕಟಿಸಿರುವ ಮಾಹಿತಿಯು ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೀಡಿರುವ ಮಾಹಿತಿ ಆಧಾರದ ಮೇಲೆ ಪ್ರಕಟಿಸಿದ್ದು ಅಂತಹ ಮಾಹಿತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಿದ ನಂತರವೇ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು. ಅಲ್ಲಿಯವರೆಗೆ ಈ ಮಾಹಿತಿಯನ್ನು ಅನುಸರಿಸಿ ಯಾವುದೆ ಅಭ್ಯರ್ಥಿಗೆ ಗ್ರಾಮ ಲೆಕ್ಕಿಗರ ಹುದ್ದೆಯ ನೇಮಕಾತಿಗೆ ಯಾವುದೆ ಹಕ್ಕು ಪ್ರಾಪ್ತವಾಗುವುದಿಲ್ಲ.

ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು
ಗ್ರಾಮ ಲೆಕ್ಕಿಗರ ಆಯ್ಕೆ ಪ್ರಾಧಿಕಾರ,
ಚಾಮರಾಜನಗರ ಜಿಲ್ಲೆ ಚಾಮರಾಜನಗರ.